Ijfans International Journal of Food and Nutritional Sciences
ISSNPRINT 23191775 Online 23207876
*ResearchPaper*©2012IJFANS.AllRightsReserved JournalUGCCAREListed(Group-I)Volume 12, Issue 01 Jan,2023

# ಹೊಸಗನ್ನಡ ಸಾಹಿತ್ಯದ ಮೂಲಪುರುಷ ಶ್ರೀ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ

**Ganesha**

Assistant Professor of Kannada, Govt. First Grade College, Gundlupet.

ಪ್ರಸ್ತಾವನೆ

ಹೊಸಗನ್ನಡ ಸಾಹಿತ್ಯದ ಮೂಲಪುರುಷರಲ್ಲಿ ಒಬ್ಬರಾದ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರು ಜನವರಿ ೩, ೧೮೮೪ರಲ್ಲಿ ತುಮಕೂರು ಜಿಲ್ಲೆಯ ಸಂಪಿಗೆ ಎಂಬ ಹಳ್ಳಿಯಲ್ಲಿ ಜನಿಸಿದರು. ತಾಯಿ ಭಾಗೀರಥಮ್ಮ; ತಂದೆ ಮೈಲಾರಯ್ಯ; ತಾಯಿಯ ಊರು ಸಂಪಿಗೆ. ತಂದೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರಿನವರು ; ಹಾಗಾಗಿ 'ಶ್ರೀ'ಯವರ ಮೂಲ ಸ್ಥಳ ಬೆಳ್ಳೂರಾಯಿತು. ಮೈಲಾರಯ್ಯನವರು ಶ್ರೀರಂಗಪಟ್ಟಣದಲ್ಲಿ ವಕೀಲಿ ವೃತ್ತಿಯನ್ನು ನಡೆಸುತ್ತಿದ್ದುದರಿಂದ ಬಿಎಂಶ್ರೀ ಅವರ ಬಾಲ್ಯ ಅಲ್ಲಿಯೇ ಕಳೆದುದು ಸಹಜ. ಶ್ರೀಕಂಠಯ್ಯನವರ ತಂದೆ ಆಗಿನ ಕಾಲದಲ್ಲಿ ಹೆಸರಾಂತ ವ್ಯಕ್ತಿಯೇ ಆಗಿದ್ದರು. ಬಿಎಂಶ್ರೀಯವರಿಗೆ ಇಬ್ಬರು ತಂಗಿಯರು, ಇಬ್ಬರು ತಮ್ಮಂದಿರು ಇದ್ದರು. ತಮ್ಮಂದಿರಲ್ಲಿ ಒಬ್ಬರಾದ ಬಿ.ಎಂ. ಶಿವರಾಮಯ್ಯನವರು ನಂಜನಗೂಡಿನಲ್ಲಿದ್ದು, ಬಹಳ ಕಾಲ ವಕೀಲಿ ವೃತ್ತಿಯಲ್ಲಿದ್ದರು. 'ಶ್ರೀ'ಯವರ ತಂಗಿಯರ ಹೆಸರು ಕಾವೇರಮ್ಮ ಮತ್ತು ನಂಜಮ್ಮ; ಕಿರಿಯ ತಮ್ಮನ ಹೆಸರು ಕೃಷ್ಣಸ್ವಾಮಿ.

ಶ್ರೀಕಂಠಯ್ಯನವರು ತಮ್ಮ ತಾಯಿಯ ಊರಾದ ಸಂಪಿಗೆಯ ದೇವಮ್ಮನವರನ್ನು ವಿವಾಹವಾದ ವಿಷಯವನ್ನು ಅವರ ಮೊದಲ ತಮ್ಮ ಶಿವರಾಮಯ್ಯನವರು ತಮ್ಮೊಂದು ಲೇಖನದಲ್ಲಿ ತಿಳಿಸಿದ್ದಾರೆ. “ಆಕೆಯಲ್ಲಿ ಅವರಿಗೆ ಅತಿಶಯವಾದ ಪ್ರೇಮವಿತ್ತೆಂದೂ ಆ ಪ್ರೀತಿಯ ಪ್ರಕಾಶಕವಾಗಿ 'ಇಂಗ್ಲಿಷ್ ಗೀತ'ಗಳಲ್ಲಿ ಕೆಲವನ್ನು ಬರೆದರೆಂದೂ ಕೇಳಿದ್ದೇನೆ” ಎಂಬುದಾಗಿ ವಿ. ಸೀತಾರಾಮಯ್ಯನವರು ಹೇಳುತ್ತಾರೆ ('ಶ್ರೀ ಸಾಹಿತ್ಯ', ಪರಿಚಯ ಕಾಣಿಕೆ). 'ಶ್ರೀ'ಯವರು ಮೊದಮೊದಲು ಉರಿಮುಖದವರೂ, ಆಮೇಲೆ ಶಾಂತಮುಖದವರೂ ಆಗಿದ್ದರೆಂಬುದು ಶಿವರಾಮಯ್ಯನವರ ಅಭಿಪ್ರಾಯ. ಮನೆಯಲ್ಲಿ ನಡೆದ ಅಚಾತುರದಿಂದ ಮಗ ಕಣ್ಣು ಕಳೆದುಕೊಳ್ಳಬೇಕಾಗಿ ಬಂದುದು ಒಂದು ದೊಡ್ಡ ದುರಂತ. ಇದಾದ ಕೆಲ ಕಾಲ ದಲ್ಲಿಯೇ ಅವರ ಪತ್ನಿ ತೀರಿಕೊಂಡರಂತೆ. ಹೆಂಡತಿಯ ಅಗಲಿಕೆ, ಮಗನ ಅಂಧತ್ವ - ಇವು ಅವರನ್ನು ಮೂಕ ಶೋಕರನ್ನಾಗಿಸಿದ್ದುವು. ಇದು ಸಾಲದೆಂಬಂತೆ ಹಿರಿಯ ಮಗಳಿಗೆ ಚಿಕ್ಕ ವಯಸ್ಸಿನಲ್ಲಿಯೇ ವೈಧವ್ಯ ಪ್ರಾಪ್ತವಾಯಿತು. ಎರಡನೆಯ ಮಗಳು ಮದುವೆಯಾಗಿ ಹೋದ ಮೇಲೆ ಈ ಹಿರಿಯ ಮಗಳೇ ಅವರನ್ನು ನೋಡಿಕೊಂಡಿದ್ದರು.

ಬಿಎಂಶ್ರೀಯವರು ತಮ್ಮಂದಿರನ್ನು ತಂದೆಯಂತೆ ನೋಡಿಕೊಂಡ ವಿಚಾರವನ್ನು ಶಿವರಾಮಯ್ಯನವರು ಹೇಳಲು ಮರೆತಿಲ್ಲ. ಇದರೊಡನೆ 'ಶ್ರೀ'ಯವರ ಔದಾರವನ್ನೂ ಅವರು ವಿವರಿಸಿದ್ದಾರೆ : “ಶ್ರೀರಂಗಪಟ್ಟಣದಲ್ಲಿ ಮತ್ತು

ಹತ್ತಿರ ಗ್ರಾಮದಲ್ಲಿ ನಮ್ಮ ತಂದೆಗಿದ್ದ ಆಸ್ತಿಪಾಸ್ತಿಗಳನ್ನು ನಾವೆಲ್ಲರೂ ಹಂಚಿಕೊಂಡಾಗ ಅಣ್ಣಯ್ಯ ಏನೂ ಪಾಲನ್ನು ತೆಗೆದುಕೊಳ್ಳದೆ ಎಲ್ಲವನ್ನೂ ನನಗೂ ನನ್ನ ತಮ್ಮನಿಗೂ ಬಿಟ್ಟುಬಿಟ್ಟು ವಿಭಾಗಪತ್ರಕ್ಕೆ ಹಾಗೇ ರುಜು ಹಾಕಿದರು. ಅವರ ಅಭಿಪ್ರಾಯದಲ್ಲಿ ಅವರ ತಂದೆತಾಯಿಗಳ ಆಶೀರ್ವಾದವೇ ಸಾಕಾಗಿತ್ತು" ("ಬಿಎಂಶ್ರೀ - ನೂರರ ನೆನಪು'). ಹಾಗೆಯೇ ನಂಜನಗೂಡಿನಲ್ಲಿ ಮನೆಕಟ್ಟಲು ಶಿವರಾಮಯ್ಯನವರು ಮಾಡಿದ್ದ ಸಾಲದ ಕೊನೆಯ ಸಾವಿರ ರೂಪಾಯಿಗಳನ್ನು ಶ್ರೀಯವರೇ ತೀರಿಸಿದ್ದನ್ನು ಕೂಡ ಅವರು ತುಂಬ ಕೃತಜ್ಞತೆಯಿಂದ ನೆನೆಯುತ್ತಾರೆ. ಈ ಸಂದರ್ಭದಲ್ಲಿ ಡಿವಿಜಿಯವರ "ಶ್ರೀಕಂಠಯ್ಯನವರು ಸರಳರು, ನಿಷ್ಕಲ್ಮಷರು, ಉದಾರಿಗಳು. ಇತರರಿಗೆ ಸಹಾಯವಾಗು ವುದರಲ್ಲಿ ಅವರಿಗೆ ಸಂತೋಷವಾಗುತ್ತಿತ್ತು" (ಅದೇ) ಎಂಬ ಮಾತನ್ನು ಅಗತ್ಯವಾಗಿ ಉದಾಹರಿಸಬೇಕು.

ಬಿಎಂಶ್ರೀಯವರು ನೋಡಲು ಹೇಗಿದ್ದರು? ಸಮಕಾಲೀನರಲ್ಲೇನೊ ಆ ಚಿತ್ರ ಅಷ್ಟೊತ್ತಿತ್ತು; ಆದರೆ ಆಮೇಲಿನವರಿಗೆ? ಅದಕ್ಕಾಗಿಯೆ ಏನೊ ಎಸ್.ವಿ. ರಂಗಣ್ಣನವರು ೧೯ಳಲರಲ್ಲಿ ನೆನಪಿನ ಒಂದು ಚಿತ್ರವನ್ನು ಕೊಟ್ಟಿದ್ದಾರೆ. ಆ ಚಿತ್ರ ವಿಸ್ತಾರವಾಗಿ ಹೀಗಿದೆ : "ದುಂಡು ದುಂಡಾದ, ಮಧ್ಯ ಎತ್ತರದ, ಭವ್ಯ ದೇಹಾಕೃತಿ; ಅಗಲವಾದ, ನಸುಗೆಂಪಿನ, ಗಂಭೀರ ಹಣೆ; ಉಬ್ಬಿದ ತಿಳಿಗೆಂಪಿನ ಲವಲವಿಕೆಯ ಕೆನ್ನೆಗಳು; ತೀಕ್ಷ್ಣವೂ ಆಲೋಚನಾ ಪೂರಿತವೂ ಅತ್ಯುತ್ಸಾಹಸೂಚಕವೂ ನಗುವನ್ನು ಸೂಸುವುದೂ ಆದ ಉಜ್ವಲಕಾಂತಿಯ ಕಣ್ಣುಗಳು; ಸ್ವಲ್ಪ ಸಣ್ಣದಾದರೂ ಮುಖಕ್ಕೆ ಮುದ್ದಾಗಿ ಹೊಂದಿಕೊಂಡ ನಾಸಿಕ; ಮಂದಸ್ಮಿತ ದಿಂದ ಕೂಡಿದ್ದರೂ ದೃಢತೆ ಕಾಠಿಣ್ಯಗಳನ್ನು ವ್ಯಕ್ತಪಡಿಸುವ ಸ್ಪಷ್ಟ ತುಟಿಗಳು; ಕೆಳಗಲ್ಲದ ಹಿಂಬದಿಯಿಂದ ಮೇಲಕ್ಕೆದ್ದು, ಕೆಳಗುಳಿಯೊಂದರಿಂದ ಕೊಂಚ ಇಬ್ಬಗೆಯಾದ ನುಣ್ಣನೆಯ ರಂಜಕ ಗಲ್ಲ; ಎಲ್ಲಕ್ಕಿಂತ ಮಿಗಿಲಾಗಿ, ಲೋಚನಾಗ್ರದಿಂದ ಅವುಡಿನವರೆಗೆ ಇಳಿದು ಬಂದು, ಕವುಳುಗಳನ್ನು ಮೂಗುಬಾಯಿಗಳಿಂದ ಪ್ರತ್ಯೇಕಿಸುತ್ತ, ಗೆಲುವಿನಿಂದ ಕೂಡಿದ ಎರಡು ಗೀರುಗಳು; ಒಟ್ಟಿನಲ್ಲಿ ಒಂದು ಸಾರಿ ನೋಡಿದರೆ ಸಾಕು, ಪ್ರೇಕ್ಷಕರ ಚಿತ್ತಭಿತ್ತಿಯಲ್ಲಿ ಕೊರೆದು ನಿಲ್ಲುವ, ಅಂಬಾರಿ ಆನೆಯಂದದ ಠೀವಿಯ ಮುಖಮುದ್ರೆ; ಏರಲೂ ಬಲ್ಲ ಇಳಿಯಲೂ ಬಲ್ಲ, ಇಂಪಾದ ಕುಗ್ಗದ ದನಿ; ಆಗಾಗ ಮೇಲಕ್ಕೆದ್ದು, ಪ್ರತಿಪಾದಿಸುವ ಅಂಶವನ್ನು ಒತ್ತಿ ಹೇಳುವ ಭಂಗಿಯನ್ನು ತಾಳುವ, ಉಚಿತಾಕಾರದ ಕೈಗಳು; ತಾವರೆಯಂತೆ ಕೆಂಪಾಗಿ ಕೋಮಲವಾದ ಅಂಗೈ; ಹಾಗೆಯೇ ರಕ್ತ ಸೋರುತ್ತಿದೆಯೋ ಎನ್ನುವಂತೆ ಕಾಣುತ್ತಿದ್ದ ಶುಭ್ರ ಸುಂದರವಾದ ಹೆಜ್ಜೆಗಳು;... ಆ ಅಂಗೈ ಆ ಅಂಗಾಲನ್ನು ಹತ್ತಿರ ಕುಳಿತು ದರ್ಶಿಸಿದವನು ಧನ್ಯ; ಏತಕ್ಕೆಂದರೆ ಅವುಗಳ ಮೇಲೆ ನಿಷ್ಕಳಂಕಿಯ ಸಂಯಮಶಾಲಿಯ, ತಪಸ್ವಿಯ, ಗುರುತು ಸ್ವಚ್ಛವಾಗಿ ಒತ್ತಿದಂತಿದ್ದಿತು" ('ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ', ಭಾಗ ೧೭ ಪೀಠಿಕೆ). ಈ ಚಿತ್ರ ಕೇವಲ ವರ್ಣನೆಯಲ್ಲ, ವ್ಯಕ್ತಿತ್ವದ ಸಾಕ್ಷಾತ್‌ದರ್ಶನ ಕೂಡ. 'ಶ್ರೀ'ಯವರು ಅನೇಕರ ಮೇಲೆ ಪ್ರಭಾವ ಬೀರಿದ್ದರು ಎಂಬುದಕ್ಕೆ ರಂಗಣ್ಣನವರ ಈ ವರ್ಣನೆಯೇ ಸಾಕ್ಷಿ.

ಶ್ರೀಕಂಠಯ್ಯನವರ ವಿದ್ಯಾಭ್ಯಾಸ ಶ್ರೀರಂಗಪಟ್ಟಣದಲ್ಲಿಯೇ ಆರಂಭಗೊಂಡಿತು; ಪ್ರೌಢಶಾಲೆ ಶಿಕ್ಷಣ ಮೈಸೂರಿನಲ್ಲಾಯಿತು. ೧೯೦೩ರಲ್ಲಿ ಎಫ್.ಎ. ಮಾಡಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿದ 'ಶ್ರೀ'ಯವರು ೧೯೦೬ರಲ್ಲಿ ಬಿ.ಎ. ಪದವಿ ಪಡೆದರು. ಅವರು ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದ ಪರಿಯನ್ನು ಬಲ್ಲವರು ತಿಳಿಸಿದ್ದಾರೆ. ಬೆಂಗಳೂರಿನ ಲಾಲ್‌ಬಾಗ್‌ಗೆ ಹೋಗಿ ಕುಳಿತು ಇಂಗ್ಲಿಷ್ ಪದ್ಯಗಳನ್ನು ಎತ್ತರದ ಧ್ವನಿಯಲ್ಲಿ ಓದುತ್ತಿದ್ದರಂತೆ. ಒಬ್ಬ ಆಂಗ್ಲ - ಇಂಡಿಯನ್ ಪ್ರವಾಸಿ ಅದನ್ನು ಕೇಳಿ ಶ್ಲಾಘಿಸಿದ್ದನ್ನು ರಂಗಣ್ಣನವರು ಉಲ್ಲೇಖಿಸಿದ್ದಾರೆ (B.M. Srikantaiah). 'ಶ್ರೀ'ಯವರು ಮದರಾಸು ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿ, ಅಲ್ಲಿ ೧೯೦೭ರಲ್ಲಿ ಬಿ.ಎಲ್. ಪದವಿಯನ್ನೂ, ೧೯೦೯ರಲ್ಲಿ ಇಂಗ್ಲಿಷ್ ಎಂ.ಎ. ಪದವಿಯನ್ನೂ ಪಡೆದರು. ಈ ಮಧ್ಯೆ ೧೯೦೮ರಲ್ಲಿ ಮೈಸೂರು ಸಿವಿಲ್ ಸೇವೆಗೆ ಸಂಬಂಧಿಸಿದಂತೆ ಪರೀಕ್ಷೆ ತೆಗೆದುಕೊಂಡರೂ, ಅವಶ್ಯ ಅಂಕಗಳು ದೊರೆಯದೆ ವಿಫಲರಾದರಂತೆ. ಇದರಿಂದ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಒಳ್ಳೆಯದೇ ಆಯಿತೆನ್ನಬೇಕು.

ತಂದೆ ಮೈಲಾರಯ್ಯನವರು ತಮ್ಮ ಮಗ ತಮ್ಮ ಹಾಗೆಯೇ ವಕೀಲಿ ವೃತ್ತಿಗೆ ಇಳಿಯುವುದು ಬೇಡವೆಂದಿದ್ದರು; ಆದರೆ 'ಡಾಕ್ಟರ್' ಆಗಬೇಕೆಂಬುದು ಅವರ ಆಸೆಯಾಗಿದ್ದಿತು. ಆದರೆ ಶ್ರೀಕಂಠಯ್ಯನವರು ನ್ಯಾಯಶಾಸ್ತ್ರವನ್ನು ಓದಿಯೂ ಅದರ ವೃತ್ತಿಗಿಳಿಯಲಿಲ್ಲ; ತಂದೆಯ ಅಪೇಕ್ಷೆಯಂತೆ ವೈದ್ಯವೃತ್ತಿಯನ್ನೂ ಪರಿಗಣಿಸಲಿಲ್ಲ. ಸಾಹಿತ್ಯ ಅವರ ಉಸಿರಾಯಿತು; ಅದು ಕನ್ನಡದ ಪುಣ್ಯ.

ಬಿಎಂಶ್ರೀಯವರ ವೃತ್ತಿ ಜೀವನದ ಸ್ಥೂಲ ಚಿತ್ರ ಇಲ್ಲಿದೆ. ಅವರು ಮಹಾರಾಜ ಕಾಲೇಜಿ ನಲ್ಲಿ ಇಂಗ್ಲಿಷ್ ಮತ್ತು ಕನ್ನಡ ಅಧ್ಯಾಪಕರಾಗಿ ಸೇರಿದರು. ಅವರ ಮೊದಲ ಮಗಳು ಶಾರದಮ್ಮ ಜನಿಸಿದ್ದು ಆ ವರ್ಷವೇ. ಐದು ವರ್ಷಗಳು ಕಳೆಯುವುದರೊಳಗೆ ಅವರು ಅಸಿಸ್ಟೆಂಟ್ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಆ ಹೊತ್ತಿಗೆ ಅವರಿಗೆ ತಮ್ಮಯ್ಯ ಮತ್ತು ತಂಗಮ್ಮ ಎಂಬ ಇನ್ನಿಬ್ಬರು ಮಕ್ಕಳಾಗಿದ್ದರು. ೧೯೧೯ರ ಫೆಬ್ರವರಿಯಲ್ಲಿ ಶ್ರೀಕಂಠಯ್ಯ ನವರು ಹಂಗಾಮಿ ಜ್ಯೂನಿಯರ್ ಪ್ರಾಧ್ಯಾಪಕರಾಗಿ (ಇಂಗ್ಲಿಷ್) ನೇಮಕರಾದರು. ಆಗ ಒಂದು ಸ್ವಾರಸ್ಯವಾದ ಪ್ರಸ್ತಾಪವಾಯಿತಂತೆ. ಶ್ರೀಕಂಠಯ್ಯನವರನ್ನು ಸೀನಿಯರ್ ಕನ್ನಡ ಪ್ರಾಧ್ಯಾಪಕ ಹುದ್ದೆ ಬೇಕೊ ಅಥವಾ ಜೂನಿಯರ್ ಇಂಗ್ಲಿಷ್ ಪ್ರಾಧ್ಯಾಪಕ ಹುದ್ದೆ ಬೇಕೊ ಎಂದು ದಿವಾನರೇ ವಿಚಾರಿಸಿದರಂತೆ. ಅದಕ್ಕೆ 'ಶ್ರೀ'ಯವರು ಜ್ಯೂನಿಯರ್ ಇಂಗ್ಲಿಷ್ ಪ್ರಾಧ್ಯಾಪಕ ಹುದ್ದೆಯನ್ನೇ ಆಯ್ದುಕೊಂಡರಂತೆ. ಆಗ ಕನ್ನಡ ಪ್ರತಿಷ್ಠಿತ ವಿಷಯವಾಗ ದಿದ್ದದ್ದೂ ಇದಕ್ಕೆ ಕಾರಣವಿರಬೇಕು; ಆಮೇಲೆ 'ಶ್ರೀ'ಯವರು ಕನ್ನಡದ ಪರವಾಗಿ ಒಲಿದಿದ್ದು ಬೇರೆಯ ವಿಷಯ.

ಶ್ರೀಕಂಠಯ್ಯನವರಿಗೆ ಹಲವಾರು ಸವಾಲುಗಳಿದ್ದವು. ಅದನ್ನವರು ಸಮರ್ಥವಾಗಿ ಎದುರಿಸಿ ದರು ಕೂಡ. ಆ ಕಾಲದಲ್ಲಿ ವಿದೇಶದಲ್ಲಿ ಕಲಿತು ಬರದೆ ಇಲ್ಲಿ ಸಮರ್ಥವಾಗಿ ನಿರ್ವಹಿಸಲು ಸಾಧ್ಯವಿಲ್ಲವೆಂಬ ಭಾವನೆ ಇತ್ತು. ಒಮ್ಮೆ ಅವರ ಸಹಪಾಠಿಯಾಗಿದ್ದ ಎನ್.ಎಸ್. ಸುಬ್ಬರಾವ್ ಅವರು ಹೇಳಿದರಂತೆ : “ವಿದೇಶಕ್ಕೆ ಹೋಗದೆ ಭವಿಷ್ಯವೆಲ್ಲಿದೆ;

Ijfans International Journal of Food and Nutritional Sciences
ISSNPRINT 23191775 Online 23207876
ResearchPaper©2012IJFANS.AllRightsReserved JournalUGCCAREListed(Group-I)Volume 12, Issue 01 Jan,2023

ಇಂಗ್ಲೆಂಡಿಗೆ ಹೋಗಿ ಆಕ್ಸ್‌ಫರ್ಡ್‌ನಲ್ಲಿ ಡಿಗ್ರಿ ಪಡೆಯದೆ ಇಂಗ್ಲಿಷ್ ಕಲಿಸುವುದಾದರೂ ಹೇಗೆ." ಅದಕ್ಕೆ 'ಶ್ರೀ' ಯವರು ಕೊಟ್ಟ ಉತ್ತರ ಹೀಗಿದೆ: "ವಿದೇಶಕ್ಕೆ ಹೋಗುವ ಯಾವ ತೊಂದರೆಯನ್ನೂ ತೆಗೆದು ಕೊಳ್ಳದೆ ನನ್ನ ವೃತ್ತಿಯನ್ನು ನಿರ್ವಹಿಸುತ್ತೇನೆ; ಇಬ್ಬರನ್ನೂ ಕಾಲ ನಿರ್ಣಯಿಸುತ್ತದೆ" (ಎಸ್.ವಿ. ರಂಗಣ್ಣ ; 'B.M. Srikantaiah'). ಈ ಮಾತಿನಲ್ಲಿ ಸಹಜವಾಗಿಯೇ 'ಶ್ರೀ'ಯವರ ಆತ್ಮಾಭಿ ಮಾನವನ್ನೂ, ಭವಿಷ್ಯದ ಬಗೆಗೆ ಆಶಾಭಾವನೆಯನ್ನೂ ಕಾಣಬಹುದಾಗಿದೆ.

ಮಹಾರಾಜ ಕಾಲೇಜಿನಲ್ಲಿಯೇ ೧೯೧೩ ಜುಲೈ ಒಂದರಂದು ಸೆಕೆಂಡ್ ಗ್ರೇಡ್ ಇಂಗ್ಲಿಷ್ ಪ್ರಾಧ್ಯಾಪಕರಾಗಿ 'ಶ್ರೀ'ಯವರು ಬಡತಿ ಪಡೆದರು. ೧೯೧೬ ನವೆಂಬರ್ ಒಂದರಿಂದ ೧೯೩೦ರ ಜುಲೈ ಒಂದರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಕನ್ನಡಕ್ಕೆ ದೊಡ್ಡ ಪ್ರಮಾಣದ ಅನುಕೂಲವಾಯಿತೆಂದೇ ಹೇಳಬೇಕು. 'ಶ್ರೀ'ಯವರ ದೃಷ್ಟಿಯಿಂದ ಮತ್ತು ಕನ್ನಡದಲ್ಲಿ ಇದೊಂದು ಮಹತ್ವಪೂರ್ಣ ಶಕೆ. ೧೯೧೭ಜುಲೈ ಒಂದರಂದು ಕನ್ನಡ ಎಂ.ಎ. ತೆರೆಯಲು ಅವರು ಕಾರಣವಾದುದು ಒಂದು ವಿಶೇಷ. ಆಗ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿದ್ದ ಬ್ರಜೇಂದ್ರನಾಥಶೀಲರು 'ಶ್ರೀ'ಯವರಿಗೆ ಒಂದು ಷರತ್ತನ್ನು ವಿಧಿಸಿದ್ದರಂತೆ. ಕನ್ನಡ ವಿಭಾಗದ ಮುಖ್ಯಸ್ಥರಾಗಿ ಮತ್ತು ಗೌರವ ಕನ್ನಡ ಪ್ರಾಧ್ಯಾಪಕರಾಗಿ 'ಶ್ರೀ'ಯವರು ಒಪ್ಪಿಕೊಂಡರೆ ಮಾತ್ರ ಕನ್ನಡ ಸ್ನಾತಕೋತ್ತರ ವಿಭಾಗವನ್ನು ತೆರೆಯಲು ಅನುಮತಿ ಕೊಡುವುದಾಗಿ ಹೇಳಿದರೆಂದು ಅಭಿಪ್ರಾಯ (ರಂಗಣ್ಣನವರ ಕೃತಿ). 'ಶ್ರೀ'ಯವರು ಈ ಆಹ್ವಾನವನ್ನು ಒಪ್ಪಿ ಕಾರ ನಿರ್ವಹಿಸಿದ ವಿಷಯ ಈಗ ಇತಿಹಾಸದ ಭಾಗವಾಗಿದೆ. 'ಶ್ರೀ'ಯವರು ವಿದ್ವತ್ತಿನ ಕ್ಷೇತ್ರದಲ್ಲಿ, ಕನ್ನಡ ಪರ ದೃಷ್ಟಿಯಲ್ಲಿ ಬೆಳೆದ ಪರಿಯನ್ನು ಕೂಡ ಈ ದೃಷ್ಟಾಂತ ತಿಳಿಸುವುದು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬ್ರಜೇಂದ್ರನಾಥಶೀಲರ ನಂತರ ವೈಸ್ ಛಾನ್ಸಲರ್ ಆಗಿದ್ದ ಮೆಟ್‌ಕ್ಯಾಫೆಯವರ ಕಾಲದಲ್ಲಿ 'ಶ್ರೀ'ಯವರು ಫಸ್ಟ್ ಗ್ರೇಡ್/ಸೀನಿಯರ್ ಇಂಗ್ಲಿಷ್ ಪ್ರಾಧ್ಯಾಪಕರಾಗಿ ೧೯೩೦ರಲ್ಲಿ ಜುಲೈನಲ್ಲಿ ಪದೋನ್ನತಿ ಹೊಂದಿದರಂತೆ. ಅನಂತರ ಅವರನ್ನು ಸೆಂಟ್ರಲ್ ಕಾಲೇಜಿಗೆ ವರ್ಗ ಮಾಡಿದಂತೆ ತೋರುವುದು. ೧೯೪೧ ನವೆಂಬರ್‌ನಲ್ಲಿ ಮೈಸೂರು ಸರ್ಕಾರ ಶ್ರೀಕಂಠಯ್ಯನವರನ್ನು ಸಾಕ್ಷರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಕಡೆಗೆ, ೧೯೪೨ ಜನವರಿಯಲ್ಲಿ ಶ್ರೀಕಂಠಯ್ಯನವರು ತಮ್ಮ ವೃತ್ತಿಯಿಂದ ನಿವೃತ್ತರಾದರು. ಇದಾದ ಮೇಲೆ, ೧೯೪೪ರಲ್ಲಿ ಧಾರವಾಡದ ಕಲಾ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಹೋದದ್ದಿದೆ. ಅದೂ ಒತ್ತಾಯದ ಮೇಲೆ ಆದದ್ದೆಂದು ಹೇಳಲಾಗಿದೆ. ಅಲ್ಲಿಯೇ ಅವರು, ೧೯೪೬ ಜನವರಿ ೫ರಲ್ಲಿ, ಹೃದಯಾಘಾತದಿಂದ ತೀರಿಕೊಂಡರು.

ಬಿ.ಎಂ. ಶ್ರೀಕಂಠಯ್ಯನವರು ಆಧುನಿಕ ಕನ್ನಡ ಸಾಹಿತ್ಯದ ನಿರ್ಮಾಪಕರಲ್ಲಿ ಒಬ್ಬರು. ಕನ್ನಡದ ಕಣ್ಮರೆಂದೂ, ಕನ್ನಡದ ಆಚಾರಪುರುಷರೆಂದೂ, ಕನ್ನಡದ ಕುಲಪತಿಯೆಂದೂ ಬಗೆಬಗೆಯಾಗಿ ಕೀರ್ತಿತರಾದವರು. ಅವರು ಮಾಡಿದ ಕನ್ನಡದ ಪ್ರಚಾರ, ಅನುವಾದಿಸಿದ ಪದ್ಯಗಳ ಪ್ರಭಾವ, ಹೊಸ ರೀತಿಯ ಕನ್ನಡ ನಾಟಕ ರಚನೆ - ಇವೆಲ್ಲವೂ

ಐತಿಹಾಸಿಕವೂ ರೋಮಾಂಚನಕಾರಿಯೂ ಆಗಿದ್ದುವು. ಕನ್ನಡ ಜನ, ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ನೂತನ ಸಂಚಲನವೊಂದನ್ನು ಅವರು ಉಂಟುಮಾಡಿದ್ದು ಈಗ ಚರಿತ್ರೆ.

ಬಿಎಂಶ್ರೀಯವರು ಮೂಲತಃ ಇಂಗ್ಲಿಷ್ ಪ್ರಾಧ್ಯಾಪಕರು. ಆಗ ಎಲ್ಲ ಕಡೆ ಇಂಗ್ಲಿಷ್ ವಾತಾವರಣ. ಎಷ್ಟರಮಟ್ಟಿಗೆಂದರೆ, ಕನ್ನಡದಲ್ಲಿ ಮಾತನಾಡುವುದು ತಪ್ಪು ಎಂದು ಆಂಗ್ಲ ಪ್ರಾಧ್ಯಾಪಕರು ನಂಬಿದ್ದ ಕಾಲ. ಇಂಗ್ಲಿಷ್ ಪ್ರಾಧ್ಯಾಪಕರಲ್ಲಿ ಶ್ರೇಣೀಕರಣ ಬೇರೆ. ನಿಜವಾದ ಇಂಗ್ಲಿಷ್ ಪ್ರಾಧ್ಯಾಪಕರೆಂದರೆ ಆಂಗ್ಲ ಜನರೇ, ಇಂಡಿಯನ್ನರಲ್ಲ ಎಂಬ ಭಾವನೆ. ಇಂತಹ ಸಂದರ್ಭದಲ್ಲಿ ಬಿಎಂಶ್ರೀ ಈ ಭಾವನೆಯನ್ನು ಹೊಡೆದು ಹಾಕಿದರು. ಮೊದಮೊದಲು ಅವರದು ಆಂಗ್ಲನಿಷ್ಠೆ; ರಾಜನಿಷ್ಠೆ. ಅವರಿಗೆ 'ರಾಜ ಸೇವಾಸಕ್ತ' ಎಂಬ ಸಾಂಪ್ರದಾಯಕ ಬಿರುದು ಬೇರೆ ಇತ್ತು. ಆದರೆ ಕನ್ನಡಕ್ಕೆ ಬಂದ ಮೇಲೆ, ಕನ್ನಡವನ್ನು ಒಲಿದ ಮೇಲೆ ಹೊಸ ಗನ್ನಡದ ನಾಂದಿಪುರುಷರಾದರು. ಪ್ರಾಚೀನ ಕನ್ನಡದಲ್ಲಿ ಕಾವ್ಯ ಮತ್ತು ನಾಟಕಗಳನ್ನು ಬರೆಯುವ ಮಟ್ಟಿಗೆ ಪ್ರತಿಭೆ ಮತ್ತು ವಿದ್ವತ್ತನ್ನು ಅವರು ಪಡೆದಿದ್ದರು.

ಬಿಎಂಶ್ರೀಯವರ ವ್ಯಕ್ತಿತ್ವದಲ್ಲಿ ಅವರ 'ವಾಗ್ಮಿತೆ' ಕೂಡ ಸೇರಿದೆ. ಕನ್ನಡದಲ್ಲಿ ಹೇಗೊ ಹಾಗೆಯೇ ಇಂಗ್ಲಿಷಿನಲ್ಲಿ ಭಾಷಣ ಕಲೆ ಅವರಿಗೆ ಕರಗತ. ಇದರಿಂದ ಅವರು 'ಭಾಷಣ ಕಲೆ' ಕುರಿತು ಇಂಗ್ಲಿಷಿನಲ್ಲಿ ಬರೆಯಲು ಸಾಧ್ಯವಾಯಿತು. ಕನ್ನಡ ಮತ್ತು ಇಂಗ್ಲಿಷಿನಲ್ಲಿ ಅವರು ಗಳಿಸಿದ ಭಾಷಾವಿದ್ವತ್ತು ಅಸದೃಶವಾದುದು. ಅವರಿಗೆ ಇಂಗ್ಲಿಷ್ ಅಲ್ಲದೆ ಗ್ರೀಕ್, ಲ್ಯಾಟಿನ್ ಭಾಷೆ ಮತ್ತು ಸಾಹಿತ್ಯದ ಪರಿಚಯ ದೃಢವಾಗಿಯೇ ಇತ್ತು. ದ್ರಾವಿಡ ಭಾಷೆಗಳಲ್ಲಿ ಕನ್ನಡವಲ್ಲದೆ, ತಮಿಳು ಮತ್ತು ತೆಲುಗುಗಳ ಪರಿಚಯ ಕೂಡ ಇತ್ತು. ಸಂಸ್ಕೃತವಲ್ಲದೆ ಪಾಲಿ, ಮಾಗಧಿ, ಬಂಗಾಳಿ ಭಾಷೆಗಳ ಪರಿಚಯವಿದ್ದಿತೆಂದು ಬಲ್ಲವರು ಹೇಳುತ್ತಾರೆ. ಅವರಿಗೆ ಶಾಸ್ತ್ರ ಮತ್ತು ಸಾಹಿತ್ಯಗಳೆರಡರಲ್ಲಿಯೂ ಪ್ರವೇಶವಿದ್ದುದರಿಂದ ಭಾಷಣವಾಗಲಿ, ಬರವಣಿಗೆ ಯಾಗಲಿ, ಬೋಧನೆಯಾಗಲಿ ಕಷ್ಟವೆನಿಸಲಿಲ್ಲ. ವಿಶಿಷ್ಟ ರೀತಿಯ ನೀತಿಗುಣ ಅವರ ವ್ಯಕ್ತಿತ್ವದ ಹೊರ ಒಳಗನ್ನು ರೂಪಿಸಿತ್ತು ಎನ್ನುವುದರಲ್ಲಿ ಸಂಶಯವಿರಲಿಲ್ಲ. ಉಪಾಧ್ಯಾಯ ವೃತ್ತಿ, ಸಾಹಿತ್ಯದ ಕೈಂಕರ್ಯ ಮತ್ತು ನಾಡನುಡಿಯ ಪ್ರೇಮ ಅವರ ವ್ಯಕ್ತಿತ್ವದ ಅಂತರಂಗವನ್ನು ರೂಪಿಸಿದ ಬಹುಮುಖ್ಯ ಅಂಶಗಳು. ಅವರ ಅಂತಃಕರಣ ಕರುಣಪೂರ್ಣವಾಗಿದ್ದರೂ, ಅಷ್ಟೇ ದೃಢಚಿತ್ತರೂ ಆಗಿದ್ದರೆಂಬುದನ್ನು ಅವರ ಸಮಕಾಲೀನರೆಲ್ಲರೂ ಬಲ್ಲವರಾಗಿದ್ದರು.

ಶ್ರೀಕಂಠಯ್ಯನವರು ಬಹುಮುಖ ಪ್ರತಿಭೆಯ ವ್ಯಕ್ತಿ ಎಂಬುದು ಸ್ಪಷ್ಟ; ಅಷ್ಟೇ ಅಲ್ಲ, ಅವರದು ಕಾರಶೀಲ ಪ್ರವೃತ್ತಿ. ಕನ್ನಡ ಭಾಷೆಗೆ, ಸೃಜನಶೀಲ ಕ್ಷೇತ್ರಕ್ಕೆ, ವಿದ್ವತ್ತಿನ ಪ್ರಕಾರಕ್ಕೆ ಅವರಿಂದ ಸಂದ ಕೊಡುಗೆ ದೊಡ್ಡದು. ಅವರು ಇಂಗ್ಲಿಷ್ ಮತ್ತು ಕನ್ನಡ ವಿಷಯಗಳೆರಡ ರಲ್ಲಿಯೂ ಪ್ರಾಧ್ಯಾಪಕರಾಗಿದ್ದುದು, ಕನ್ನಡ ವಿಷಯ ವಿಶ್ವವಿದ್ಯಾನಿಲಯದಲ್ಲಿ ನೆಲೆ ನಿಲ್ಲುವಂತೆ ಮಾಡಿದ್ದು ವಿಶೇಷ ಅವರು ರಿಜಿಸ್ಟ್ರಾರ್ ಆದುದು ಕನ್ನಡದ ಬೆಳವಣಿಗೆಗೆ ಆಡಳಿತಾತ್ಮಕ ಪ್ರೋತ್ಸಾಹ ದೊರೆಯಿತು. ಈ ಹಿನ್ನೆಲೆಯಲ್ಲಿ ನೋಡಿದಾಗ, "ಬಿ.ಎಂ. ಶ್ರೀಕಂಶಯ್ಯನವರಂಥ ಒಬ್ಬ ಸಮರ್ಥವಾದ ವ್ಯಕ್ತಿ ಸರಿಯಾದ

ಸ್ಥಾನಕ್ಕೆ ಬಂದದ್ದರಿಂದ ಐವತ್ತು ವರ್ಷ ನಾವು ಅದರ ಸತ್ವಲವನ್ನು ಅನುಭವಿಸಿದ್ದೇವೆ. ಮುಂದೆ ಇನ್ನು ಐವತ್ತು ವರ್ಷವಾದರೂ ಆ ಫಲ ದೊರಕುತ್ತಿರುತ್ತದೆ'' ಎಂಬ ಮಾತು ಬಂದುದೆಂದು ಕಾಣುತ್ತದೆ (ಎ.ಆರ್. ಕೃಷ್ಣಶಾಸ್ತ್ರೀ, ಬಿ.ಎಂ.ಶ್ರೀ : ನೂರರ ನೆನಪು.)

'ಶ್ರೀ'ಯವರು ಕವಿಗಳೂ, ಅನುವಾದಕರೂ, ನಾಟಕಕಾರರೂ, ಭಾಷಣಕಾರರೂ ಆಗಿದ್ದ ರೆಂಬುದು ಸಾಮಾನ್ಯ ಅಭಿಪ್ರಾಯ. ಈ ಎಲ್ಲ ಕ್ಷೇತ್ರಗಳಲ್ಲಿ ಸಮಾನ ಸಾಧನೆ ಇರಲಿಲ್ಲ ಎಂಬುದು ಬೇರೆಯ ವಿಚಾರ. ಅವರು ಅನೇಕರನ್ನು ಈ ಕ್ಷೇತ್ರಕ್ಕೆ ಸೆಳೆದರೆಂಬುದು ಮುಖ್ಯ ವಿಷಯ. ಕನ್ನಡದ ಸ್ಥಿತಿಯನ್ನು ಸುಧಾರಿಸಲು ಅವರು ಪಟ್ಟ ಶ್ರಮ ಸಾಮಾನ್ಯವಾದುದಲ್ಲ. ಆ ಕಾಲವನ್ನು ನೆನೆಸಿಕೊಂಡರೆ, ಅವರ ಹೋರಾಟ ಎಷ್ಟು ಅನಿವಾರವಾಗಿತ್ತು ಎಂಬುದು ಗೊತ್ತಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಎ.ಎನ್. ಮೂರ್ತಿರಾಯರ ದೃಷ್ಟಿ ಇದು : "ಅವರು ಪ್ರಥಮತಃ ಅಧ್ಯಾಪಕರಲ್ಲ, ಭಾಷಣಕಾರರಲ್ಲ; ಇವೆರಡಕ್ಕಿಂತ ಹೆಚ್ಚಾಗಿ ಕವಿಗಳು. ಅದಕ್ಕಿಂತ ಹೆಚ್ಚಾಗಿ ಅವರು ಸೇನೆಯೊಂದರ ಸೇನಾನಿ, ಕ್ರಾಂತಿಯೊಂದರ ಕೇಂದ್ರ, ಪಂಥವೊಂದರ ಪ್ರವಾದಿ" (ಬಿ.ಎಂ.ಶ್ರೀ: ನೂರರ ನೆನಪು). ಹೀಗೆ ಒಮ್ಮೆಲೆ ಹೇಳಿಬಿಡುವುದು ಸರಿಕಾಣದು. ಅವರು ಒಳ್ಳೆಯ ಅಧ್ಯಾಪಕರಾಗಿದ್ದರೆಂಬುದನ್ನು ಅವರ ಶಿಷ್ಯರೇ ಹೇಳಿದ್ದಾರೆ ; ಇದು ವೃತ್ತಿ ಗೌರವಕ್ಕೆ ಸಂಬಂಧಪಟ್ಟ ವಿಚಾರ. ಭಾಷಣಕಾರರಲ್ಲ ಎನ್ನುವುದೂ ಸರಿಯಲ್ಲ; ಅದಕ್ಕೆ ಕರ್ನಾಟಕದಾದ್ಯಂತ ತಿರುಗಿ ಕನ್ನಡ ಭಾಷಿಗರನ್ನು ಎಚ್ಚರಿಸಿದ್ದು ನಿದರ್ಶನ. ಅವರು ಕವಿ, ಕ್ರಾಂತಿಕಾರ ಎಂಬೆರಡು ಮಾತುಗಳು ಒಪ್ಪುವಂಥವೇ; 'ಕ್ರಾಂತಿಕಾರಿ' ಎನ್ನುವುದು ಭಾಷೆಯ ವಿಚಾರಕ್ಕೆ ಸಂಬಂಧಿಸಿದ್ದು, ವಿಚಾರಕ್ರಾಂತಿಗೆ ಸಂಬಂಧಿಸಿದ್ದಲ್ಲ. ಇನ್ನು 'ಪಂಥ'ದ ವಿಷಯ - 'ರೋಮ್ಯಾಂಟಿಕ್' ಎಂದರೆ ಸರಿ, 'ನವೋದಯ' ಅದಕ್ಕೂ ವಿಸ್ತಾರವಾದುದು. ಹೀಗೆಲ್ಲಾ ಹೇಳಿಕೆ ಮಾಡುವುದಕ್ಕಿಂತ, ವಾಸ್ತವವಾಗಿ 'ಶ್ರೀ'ಯವರು ಏನು ಮಾಡಿದ್ದಾರೆಂಬುದನ್ನು ನೋಡಿದರೆ ಸಾಕೆನಿಸುತ್ತದೆ.

ಸ್ವಾತಂತ್ರ್ಯ ಚಳುವಳಿಯ ಬಗೆಗೆ 'ಶ್ರೀ'ಯವರು ಅವಜ್ಞೆ ತೋರಿದ್ದು ಎಳ್ಳಷ್ಟೂ ಸರಿಯಲ್ಲ. ಇದನ್ನು ಆ ಕಾಲಕ್ಕೆ ಕೆಲವರು ಗುರುತಿಸಿದ್ದರೂ, 'ಶ್ರೀ'ಯವರ ಅಭಿಮಾನದ ಮೇಲೆ ಅದನ್ನು ತೆಳುಗೊಳಿಸಿದ್ದರು. ಟಿ.ಎಸ್. ಶಾಮರಾಯರ ಈ ಅಭಿಪ್ರಾಯವನ್ನು ನೋಡಿ : "ಅವರು ನಮ್ಮ ರಾಷ್ಟ್ರಪಿತ ಮಹಾತ್ಮಾಗಾಂಧಿಯವರ ಹೆಸರನ್ನೆತ್ತಿಕೊಂಡು ನೇರವಾಗಿ ಅಲ್ಲದಿದ್ದರೂ ಸುತ್ತು ಬಳಸಾಗಿ ಸ್ವಲ್ಪ ಲಘುವಾಗಿಯೆ ಮಾತನಾಡಿದ್ದರು. ಮರು ನಿಮಿಷದಲ್ಲಿ ಮೈಸೂರು ಮಹಾರಾಜರನ್ನು ಬಾಯ್ತುಂಬ ಹೊಗಳಿ ಹಾಡಿದರು. ರಾಷ್ಟ್ರಪ್ರೇಮ ಹುಚ್ಚು ಹೊಳೆಯಾಗಿ ಹರಿಯುತ್ತಿದ್ದ ಆ ಕಾಲದಲ್ಲಿ ಈ ಮಾತುಗಳಿಂದ ಮನನೊಂದವರೂ ಉಂಟು. ಆದರೇನು ಮಾಡುವುದು? 'ಶ್ರೀ'ಯವರಿಗೆ ಆಳುವ ಮಹಾಸ್ವಾಮಿಯವರೆಂದರೆ ಎಲ್ಲಿಲ್ಲದ ಅಭಿಮಾನ, ಗೌರವ, ಭಕ್ತಿ. ಇದು ಒಮ್ಮೊಮ್ಮೆ ಅತಿರೇಕಕ್ಕೆ ಹೋಗುತ್ತಿದ್ದುದೂ ಉಂಟು" (ಬಿಎಂಶ್ರೀ: ನೂರರ ನೆನಪು). ಇದಕ್ಕೆ ಮಹಾರಾಜರು ನೀಡಿದ 'ರಾಜಸೇವಾಸಕ್ತ' ಬಿರುದು, ಜೋಡಿಶಾಲು, ಜರೀ ಪೇಟ, ಗಂಡಭೇರುಂಡ ಪದಕದ ಬಂಗಾರ ಹಾರ ಕಾರಣವಾಗಿರಬಹುದು; ಹಾರವನ್ನು ಧರಿಸಿಯೇ ಕಾಲೇಜಿಗೆ

ಬಂದರೆಂದೂ, ಅದನ್ನು ಎಲ್ಲರಿಗೂ ಪರಿಚಯಿಸಿದರೆಂದೂ, ಅದು ಅವರ ಮುಗ್ಧ ಹೃದಯವನ್ನು ತೋರಿಸುತ್ತದೆಂದೂ ಟಿ.ಎಸ್. ಶಾಮರಾಯರು ಬರೆಯುತ್ತಾರೆ. ಆದರೆ ಗಾಂಧೀಜಿಯ ಬಗೆಗೆ ನೇರವಾಗಿ (ಲಘುವಾಗಿ) ಮಾತಾಡಿಲ್ಲವೆಂಬ ಅವರ ಅಭಿಪ್ರಾಯ ಸರಿಯಲ್ಲ. ಗಾಂಧೀಜಿಯವರನ್ನು 'ಹಂಬಗ್' ಎಂದು ಟೀಕಿಸಿದ್ದನ್ನು ಎ.ಎನ್. ಮೂರ್ತಿ ರಾಯರೇ ಹೇಳಿದ್ದಾರೆ. ಅವರ ಮಾತನ್ನೇ ಇಲ್ಲಿ ಉಲ್ಲೇಖಿಸಲಾಗಿದೆ: "ಬಿ.ಎಂ.ಶ್ರೀಕಂಠಯ್ಯ ನವರೇ ಗಾಂಧೀಜಿಯನ್ನು 'ಕಲೋಸಲ್ ಹಂಬಗ್ (Colossal Humbag)' ಎಂದು ಕರೆದರು. (ಅವರು ಆ ಮಾತಾಡಿದ ಸಭೆಯಲ್ಲಿ ನಾನಿರಲಿಲ್ಲ; ಆದರೆ ಆಡಿದ್ದುಂಟು ಎಂದು ತೀರ್ಮಾನಿಸುವುದಕ್ಕೆ ಸಾಕಷ್ಟು ಆಧಾರಗಳಿದ್ದುವು.) ಆಗ ನಾವೆಲ್ಲ ಅವರನ್ನು 'ದೇಶದ್ರೋಹಿ' ಎಂದು ಕರೆದೆವು. ಅವರ ಆಂಗ್ಲ ಸಾಹಿತ್ಯಪ್ರೇಮ ಮಿತಿಮೀರಿ ಆಂಗ್ಲ ಸರ್ಕಾರಕ್ಕೂ ಸಂದಿತ್ತು. ನನಗೆ ಈಗಲೂ ಅವರ ದೃಷ್ಟಿ ಸರಿ ಎನಿಸುವುದಿಲ್ಲ. ಆದರೆ ಅವರನ್ನು 'ದೇಶದ್ರೋಹಿ' ಎಂದು ಕರೆದದ್ದು ಸಮಸ್ಯೆಯನ್ನು ತೀರ ಸರಳ ಮಾಡಿದಂತಾಯಿತು - ಅದು ಇಂದಿನ ದೃಷ್ಟಿ" ('ಸಂಜೆಗಣ್ಣಿನ ಹಿನ್ನೋಟ'). ಇಂತಹ ಮಾತನ್ನು ಆ ಕಾಲದಲ್ಲಿ ಹೇಳಬೇಕಾಗಿದ್ದರೆ ಬಹಳ ಧೈರ ಬೇಕಾಗಿತ್ತು; ಆ ಧೈರವನ್ನು ಬಿಎಂಶ್ರೀ ಪ್ರಕಟಿಸಿದ್ದಾರೆ. ಈ ಮಾತನ್ನು ತಮ್ಮ ಮೇಲಿನ ಬ್ರಿಟಿಷರ ಮತ್ತು ಮಹಾರಾಜರ ಋಣ ತೀರಿಸಲು ಆಡಿರಬಹುದೆ? ಭಾರತದ ಜೀವನ ನವೋದಯಕ್ಕೆ ಕಾರಣರಾದ ಸ್ವಾತಂತ್ರ್ಯ ಶಿಲ್ಪಿ ಗಾಂಧೀಜಿ ಕುರಿತು ಸಾಹಿತ್ಯ ನವೋದಯಕ್ಕೆ ಕಾರಣರಲ್ಲಿ ಒಬ್ಬರಾದ 'ಶ್ರೀ'ಯವರು ಆಡಿದರೆಂದರೆ ಅದೊಂದು ದುರದೃಷ್ಟವೆಂದೇ ಹೇಳ ಬೇಕು. ಗಾಂಧೀಜಿಯ ಪ್ರಾಮಾಣಿಕತೆಯನ್ನು, ಪ್ರಶ್ನಿಸುವುದಾದರೆ, ಯಾರ ಪ್ರಾಮಾಣಿಕತೆಯನ್ನು ಬೇಕಾದರೂ ಪ್ರಶ್ನಿಸಬಹುದು; 'ಶ್ರೀ'ಯವರು ಕೂಡ ಇದರಿಂದ ಹೊರತಾಗುವುದಿಲ್ಲ, 'ಶ್ರೀ'ಯವರ ಪ್ರತಿಭೆ ಆಳರಸರ ಕೈಗೆ ಸಿಕ್ಕಿ – ಇಂಗ್ಲಿಷರು, ಮಹಾರಾಜರಾದರು ಯಾರಾದರೂ ಆಗಿರಬಹುದು – ನಲುಗಿಹೋದಂತೆ ಕೂಡ ಕಾಣುತ್ತದೆ. ಅವರಲ್ಲಿ ಅವರಿಗೆ ಶ್ರದ್ಧೆ ಇದ್ದರೆ ನಾವೇನೂ ಮಾಡಲಾರೆವು; ಇಕ್ಕಟ್ಟಾಗಿದ್ದರೆ ಕನಿಕರಕ್ಕೆ ಅವರು ಅರ್ಹರು.

'ಶ್ರೀ'ಯವರ ಸೃಜನಶೀಲತೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೊಸ ವಾತಾವರಣವನ್ನು ಕಲ್ಪಿಸುವುದರಲ್ಲಿ ಹೆಚ್ಚು ನಿರತವಾದಂತೆ ತೋರುವುದು. ಅದಮ್ಯ ಸೃಜನಶೀಲತೆಯಲ್ಲಿ ತಾನೇ ಭಾಗವಹಿಸುವುದಕ್ಕಿಂತ, ಇತರರ ಅಂಥ ಸೃಜನೆಯಲ್ಲಿ ಸಂತೋಷಪಡುವ ಗುಣವನ್ನು ಹೊಂದಿತ್ತು. ಇದಕ್ಕೆ ಎ.ಎನ್. ಮೂರ್ತಿರಾಯರ ಈ ಮಾತನ್ನು ಗಮನಿಸಿ : "ಶ್ರೀಯವರ ಪ್ರತಿಭೆ ಮಹಾಕೃತಿಯೊಂದರ ಲಯಕ್ಕೆ ಸರಿಯಾಗಿ ಮಿಡಿಯಬಲ್ಲದು, ಅದರ ಕರೆಗೆ ಓಗೊಡ ಬಲ್ಲದು, ಆದರೆ ತಾನೇ ಆ ಮಟ್ಟದ ಕೃತಿಯನ್ನು ಸೃಷ್ಟಿಸಲಾರದು. ಬಹುಶಃ ಇದು ಅವರ ಪ್ರತಿಭೆಯ ಗುಣ. ಅದನ್ನು ಸೃಷ್ಟಿಶಕ್ತಿಯುಳ್ಳ ಪ್ರತಿಭೆ ಎನ್ನುವುದಕ್ಕಿಂತ ಸೃಷ್ಟಿಗೆ ಪ್ರತಿಸ್ಪಂದನ ಕೊಡಬಲ್ಲ ಪ್ರತಿಭೆ ಎಂದರೆ ಸರಿಹೋದೀತೇನೋ" (ಬಿಎಂಶ್ರೀ : ನೂರರ ನೆನಪು). ಈ ಎರಡು ಗುಣಗಳನ್ನು ಅವರ 'ಇಂಗ್ಲಿಷ್ ಗೀತಗಳು' ಮತ್ತು 'ಹೊಂಗನಸುಗಳು' ಸಂಕಲನಗಳೇ ತೋರ್ಪಡಿಸಿವೆ. ಮೊದಲನೆಯದರಲ್ಲಿ ಪ್ರತಿಸ್ಪಂದನ ಪ್ರತಿಭೆ ಗೆದ್ದಿದೆ ; ಎರಡನೆಯದರಲ್ಲಿ ಅವರ

ಸೃಷ್ಟಿಶೀಲ ಪ್ರತಿಭೆ ಸೋತಿದೆ. ಅವರ ಪ್ರಖ್ಯಾತ ನಾಟಕ 'ಅಶ್ವತ್ಥಾಮನ್' ಕೂಡ 'ಏಜಾಕ್ಸ್' ನಾಟಕದ ನೆರಳಿನಲ್ಲಿಯೇ ನಡೆದದ್ದು ಎಂಬುದನ್ನು ಗಮನಿಸಿದಾಗ ಇದು ಇನ್ನಷ್ಟು ಗಟ್ಟಿಗೊಳ್ಳುತ್ತದೆ. ಅವರ ಶಕ್ತಿ 'ಭಾಷಣ'ದಲ್ಲಿ ಹಂಚಿಹೋಗದಿದ್ದರೆ, ಇನ್ನಷ್ಟು ಕೃತಿಗಳಲ್ಲಿ ಮೈದೋರುತ್ತಿತ್ತೋ ಏನೊ!

'ಶ್ರೀ'ಯವರು ಯುಗ ನಿರ್ಮಾಣದ ಕೆಲಸವನ್ನು ಮಾಡಿದವರು. ಅವರ 'ಇಂಗ್ಲಿಷ್ ಗೀತಗಳು' ಯುಗಪ್ರವರ್ತಕ ಕೃತಿ ಎಂಬ ಹೆಗ್ಗಳಿಕೆಗೆ ಕಾರಣವಾಯಿತು. ಆದರೆ ಅದು ಎಷ್ಟು ಪ್ರಭಾವ ಬೀರಿತು, ಯಾರು ಯಾರು ಅದರ ಪ್ರಭಾವಕ್ಕೆ ಒಳಗಾದರು ಎಂಬ ವಿಷಯ ದಾಖಲಾಗಲಿಲ್ಲ. ಎನ್. ಬಾಲಸುಬ್ರಹ್ಮಣ್ಯ ಅವರು "ಸಾಮಾನ್ಯವಾಗಿ ಯಾವುದೇ ಕೃತಿಯನ್ನು ಆ ಸಾಹಿತ್ಯದ ಯುಗಪ್ರವರ್ತಕ ಕೃತಿ ಎನ್ನುವಲ್ಲಿ ಆ ಕೃತಿ ಸಂಸ್ಕೃತಿಗೆ ಸೇರಿದ, 'ಆ ಭಾಷೆಯಲ್ಲಿ ರಚಿತವಾದ ಸ್ವತಂತ್ರ ಕೃತಿಯಾಗಿರುತ್ತದೆ' ಎಂದೇನೊ ಹೇಳಿದ್ದಾರೆ (ಬಿಎಂಶ್ರೀ : ನೂರರ ನೆನಪು). ಈ ಮಾತೇ 'ಇಂಗ್ಲಿಷ್ ಗೀತಗಳು' ಕೃತಿಯ ಮಿತಿಯನ್ನು ಹೇಳುತ್ತದೆ. ಇದಕ್ಕೆ 'ಶ್ರೀ'ಯವರ ಕೃತಿ 'ಅಪವಾದ' ಎಂದು ಅವರು ಹೇಳಿದರೂ, ಸಾಂಸ್ಕೃತಿಕವಾಗಿ ಅದು ಯುಗಪಲ್ಲಟಕ್ಕೆ ಕಾರಣವಾಗಿಲ್ಲ. ಕೇವಲ ಸಾಹಿತ್ಯಕವಾಗಿ ಹೊಸ ನಿರ್ಮಾಣಕ್ಕೆ ಅದು ಕಾರಣ ವಾಯಿತು. ಈ ಅನುವಾದ ಕೃತಿ ಬಂದ ಕಾಲದಲ್ಲಿಯೇ ಸ್ವತಂತ್ರ ಕವಿತೆಗಳು ಬರುತ್ತಿದ್ದುವು ಎಂಬುದನ್ನು ಮರೆಯಲಾಗದು. ಅದರಿಂದ 'ರೂಪ'ವನ್ನು ಹೊಸಗನ್ನಡ ಕಾವ್ಯ ಪಡೆಯಿತೇ ಹೊರತು, ದೃಷ್ಟಿ ಮತ್ತು ವಸ್ತುವನ್ನು ಪಡೆಯಿತೆನ್ನುವುದು ಸರಿಯಲ್ಲ. ಒಂದು ಪಕ್ಷ ವಸ್ತು ಮತ್ತು ದೃಷ್ಟಿಯನ್ನು ಹೊಸಗನ್ನಡ ಕಾವ್ಯ ಪಡೆಯಿತೆನ್ನುವುದು ಸರಿಯಲ್ಲ. ಒಂದು ಪಕ್ಷ ವಸ್ತು ಮತ್ತು ದೃಷ್ಟಿಯನ್ನು ಹೊಸಗನ್ನಡ ಕಾವ್ಯ ಪಡೆಯಿತೆನ್ನುವುದಾದರೆ, ಸ್ವತಃ ಬಿಎಂಶ್ರೀ ಯವರೇ ತಮ್ಮ 'ಹೊಂಗನಸುಗಳು' ಎಂಬ ಸ್ವತಂತ್ರ ಕೃತಿಯಲ್ಲಿ ತರಲಿಲ್ಲವೇಕೆ ಎಂಬ ಪ್ರಶ್ನೆ ಹುಟ್ಟುತ್ತದೆ. 'ಇಂಗ್ಲಿಷ್ ಗೀತಗಳು' ಸೃಷ್ಟಿಸಿದ 'ಹೊಸಯುಗ'ಕ್ಕೆ ಅವರ ಸ್ವತಂತ್ರ ಕೃತಿಯೇ ಹೊರತಾದುದು ವಿಪರ್ಯಾಸವೇ ಸರಿ. ಅವರ ಈ ಅನುವಾದ ಕೃತಿಯ ಮೂಲಕ 'ರೊಮ್ಯಾಂಟಿಕ್ ಪಂಥ' ಮತ್ತು 'ರೊಮ್ಯಾಂಟಿಕ್ ದೃಷ್ಟಿ' (ಅದೇ) ಹೊಸಗನ್ನಡದಲ್ಲಿ ಬೆಳೆಯಿ ತೆಂಬ ಬಾಲಸುಬ್ರಹ್ಮಣ್ಯ ಅವರ ಮಾತನ್ನು ಒಂದು ಹಂತದಲ್ಲಿ ಒಪ್ಪೋಣ; ಆದರೆ, ಅವರ ಸ್ವತಂತ್ರ ಕೃತಿಯಲ್ಲಿಯೇ ಇದು ಕಾಣದಾಯಿತಲ್ಲ, ಇದಕ್ಕೇನು ಕಾರಣ? ಆದ್ದರಿಂದ, 'ಇಂಗ್ಲಿಷ್ ಗೀತಗಳು' ನಿಜವಾಗಿಯೂ 'ರೊಮ್ಯಾಂಟಿಕ್ ಪಂಥ'ವನ್ನು ಬೆಳೆಯಿಸಿತೆಂಬುದರ ಬಗೆಗೆ ಬಿಎಂಶ್ರೀಯವರಿಗೇ ಸ್ಪಷ್ಟ ಕಲ್ಪನೆಯಿದ್ದಿರಲಿಲ್ಲ. ಇಂಗ್ಲಿಷ್ ರೊಮ್ಯಾಂಟಿಕ್ ಪಂಥ ಬಹಳ ಸೀಮಿತವಾದುದು; ಕನ್ನಡ ನವೋದಯ ಇದನ್ನು ಒಳಗೊಂಡಂತೆ ತೀರ ವಿಶಾಲವಾದುದು. ಕನ್ನಡ ನವೋದಯ ಒಂದು ಜೀವನ ದೃಷ್ಟಿಯೇ ಹೊರತು ಪಂಥವಲ್ಲ ಎಂಬುದನ್ನು ಮನಗಾಣಬೇಕು. ಕನ್ನಡ ನವೋದಯ ಮೊದಲ ಬಾರಿಗೆ ಸಾಮಾನ್ಯನ ಜೀವನವನ್ನು ಸಾಹಿತ್ಯ ದಲ್ಲಿ ಉದ್ಘಾಟಿಸಿತು ; 'ಶ್ರೀ'ಯವರ 'ಹೊಂಗನಸುಗಳು' ಕೃತಿಯ ಜೀವನ ದೃಷ್ಟಿ ಇದನ್ನು ಬೆಳೆಸುವಂಥದಾಗಿರಲಿಲ್ಲ ಎಂಬುದನ್ನು ಅನಿವಾರವಾಗಿ ಹೇಳಬೇಕು.

**ಸಮಾರೋಪ**

ಬಿಎಂಶ್ರೀಯವರನ್ನು ಹೊಸಗನ್ನಡ ಸಾಹಿತ್ಯಕ್ಕೆ ನಾಂದಿ ಹಾಡಿದ ಪುರುಷರೆಂದು ನಾವೆಲ್ಲರೂ ಹೇಳುತ್ತಿದ್ದೇವೆ. ಇಂಗ್ಲಿಷ್ ಸಾಹಿತ್ಯದ ಅಧ್ಯಯನ ಮತ್ತು 'ಇಂಗ್ಲಿಷ್ ಗೀತಗಳು' ನೀಡಿದ ಹೊಸ ಲಯಗಳು ಕಾರಣವೆನ್ನುವುದಾದರೆ ಇದು ಅರ್ಥಪೂರ್ಣ. ಆದರೆ ಭಾರತದ ಸಾಮಾಜಿಕ ಮತ್ತು ಸಾಹಿತ್ಯಕ ಪುನರುಜ್ಜಿವನಕ್ಕೆ ದೇಶದೊಳಗೇ ನಡೆದ ಸಮಗ್ರ ಕ್ರಾಂತಿಯು ಕಾರಣವೆನ್ನು ವುದಾದರೆ ಮೇಲಿನ ಮಾತು ಪೂರ್ಣವಾಗುವುದಿಲ್ಲ. ದೇಶ ಭಾಷೆಗಳಲ್ಲಿ ತಲೆದೋರಿದ ನವೋದಯಕ್ಕೆ ಇಂಗ್ಲಿಷ್ ಸಾಹಿತ್ಯದ 'ಹೊಸ ಭಾವನೆ' ಎಷ್ಟು ಕಾರಣವೆಂದು ಹೇಳುತ್ತೇವೆಯೊ, ಅದರಷ್ಟೆ ಅಥವಾ ಅದಕ್ಕಿಂತ ಹೆಚ್ಚು ಭಾರತದೊಳಗೆ ನಡೆದ ತೀವ್ರ ಸಂವೇದನಾಶೀಲವಾದ ಸ್ವಾತಂತ್ರ್ಯ ಸಮಗ್ರ ಕ್ರಾಂತಿಯಿಂದ ಉಂಟಾಗುತ್ತಿದ್ದ ಸಾಮಾಜಿಕ ನವೀನತೆಯೂ ಕಾರಣವಾಯಿ ತೆನ್ನುವುದನ್ನು ಮರೆಯಲಾಗದು. ಇಂಗ್ಲಿಷ್ ಸಾಹಿತ್ಯದ ಸಂಪರ್ಕದಿಂದ 'ಶ್ರೀ'ಯವರು ಸ್ವತಂತ್ರವಾಗಿ ಆಲೋಚಿಸದೆ ಹೋದುದು ಆಶ್ಚರವೆನಿಸುವುದು; ಸಾಮ್ರಾಜ್ಯಶಾಹಿಯ ಪ್ರಭಾವಕ್ಕೆ ಒಳಗಾದುದು ಪ್ರಗತಿಗಾಮಿಯಾದ ದೃಷ್ಟಿಯಲ್ಲವೆಂದೇ ತೋರುವುದು. ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವ ಅವರ ಮೇಲಾಗಿದ್ದರೆ, ಅದರ ಫಲಚಿಂತನೆಯನ್ನು ಅವರು ಮಾಡಿದ್ದರೆ ಇನ್ನೂ ದೂರಗಾಮಿ ದೃಷ್ಟಿಯುಳ್ಳವರಾಗುತ್ತಿದ್ದರು. ಈಗಿರುವ ಸ್ಥಿತಿಯಲ್ಲಿ ಅವರಲ್ಲಿ ಈ ಕೊರತೆ ಎದ್ದು ತೋರುತ್ತದೆ; ಅದು ಅವರ ನವೋದಯ ನಾಂದಿಯ ಕೊರತೆಯೂ ಹೌದು. ಆದ್ದರಿಂದ ಭಾರತೀಯ ನವೋದಯದ ಸಮಗ್ರ ಕಲ್ಪನೆಯ ದೊಡ್ಡ ಉದಾಹರಣೆಯಾಗಿ ಅವರನ್ನು ತೆಗೆದುಕೊಳ್ಳುವುದು ಕಷ್ಟವಾಗಬಹುದು; ಒಂದು ಸೀಮಿತಾರ್ಥದಲ್ಲಿ ಮಾತ್ರ ಅವರು ನವೋದಯದ ನಾಂದಿಪುರುಷರು.

ಕನ್ನಡ ನವೋದಯ ಕೇವಲ ಇಂಗ್ಲಿಷ್ ನವೋದಯ ಅಲ್ಲ. ಇಂಗ್ಲಿಷ್ ನವೋದಯ ಮತ್ತು ಸಮಕಾಲೀನ ಸ್ವಾತಂತ್ರ್ಯಕ್ರಾಂತಿ ಮತ್ತದರ ಹೊಸ ಮೌಲ್ಯಗಳು ಹಾಗೂ ಸಾಮಾಜಿಕ ಬದಲಾವಣೆ ಸೇರಿಕೊಂಡು ಕನ್ನಡ ನವೋದಯ ಆಗುತ್ತದೆ. ಇಂತಹ ಸಮಗ್ರ ಕನ್ನಡ ನವೋದಯದ ನೇತಾರರಾಗಿ ಬಿಎಂಶ್ರೀಯವರು ಹೊರಹೊಮ್ಮಲೇ ಇಲ್ಲ.

**ಆಕರ ಗ್ರಂಥಗಳು**

1. ಬಿ.ಎಂ. ಶ್ರೀಕಂಠಯ್ಯ : ರಾಗೌ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೭.
2. ಬಿ.ಎಂ. ಶ್ರೀಕಂಠಯ್ಯ - ಪ್ರೊ. ರಾಗೌ, ಅಭಿವ್ಯಕ್ತಿ, ಸಾಹಿತ್ಯ ಮಾಸಿಕ, ಫೆಬ್ರವರಿ ೨೦೦೦, ಕರ್ನಾಟಕ ಸಾಹಿತ್ಯ ಸಂಘ, ಮಂಡ್ಯ.
3. ಬಿ.ಎಂ. ಶ್ರೀಕಂಠಯ್ಯ : ಎ.ಎನ್. ಮೂರ್ತಿರಾವ್, ಕನ್ನಡ ಸಾಹಿತ್ಯ ಪರಿಷತ್ತು, ೨೦೦೯.

ISSNPRINT 23191775 Online 23207876
ResearchPaper©2012IJFANS.AllRightsReserved,JournalUGCCAREListed(Group-I)Volume 12, Issue 01 Jan,2023


4. ಶ್ರೀ ಸಾಹಿತ್ಯ (ಆಚಾರ್ಯ ಬಿ.ಎಂ. ಶ್ರೀಕಂಠಯ್ಯ ಅವರ ಸಮಗ್ರ ಕೃತಿ ಸಂಪುಟ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೩.
5. ಆಚಾರ್ಯ ಬಿ.ಎಂ.ಶ್ರೀ. : ಎಲ್.ಎಸ್. ಶೇಷಗಿರಿರಾವ್, ೧೯೮೪.
6. ಬಿ.ಎಂ.ಶ್ರೀಕಂಠಯ್ಯ : ಪ್ರೊ. ಡಿ. ಲಿಂಗಯ್ಯ, ಬೆಂಗಳೂರು, ೨೦೦೫.
7. ಮಾಸ್ತಿ ವೆಂಕಟೇಶ (ಸಂ) : ಸಂಭಾವನೆ (ಶ್ರೀಯವರ ಅಭಿನಂದನಾ ಗ್ರಂಥ), (೧೯೪೧, ೧೯೭೯)